## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 127 |
| **ಸದಸ್ಯರ ಹೆಸರು** | : | ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | 11.08.2025. |
| **ಉತ್ತರಿಸುವ ಸಚಿವರು** | : | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಲೆನಾಡು ಜಿಲ್ಲೆಗಳ ಬಹುತೇಕ ಶಾಲೆಗಳು ಅರಣ್ಯ ಪ್ರದೇಶಗಳಲ್ಲಿ ಇರುವುದರಿಂದ ಆ ಜಾಗವನ್ನು ಜಿ.ಪಿ.ಎಸ್ ಮಾಡಿಕೊಡುವುದರ ಜೊತೆಗೆ ಶಾಲೆಯ ಹೆಸರಿಗೆ ಮಾಡಿಕೊಡುವುದರ ಬಗ್ಗೆ ಅರಣ್ಯ ಇಲಾಖೆ ತೆಗೆದುಕೊಂಡ ಕ್ರಮಗಳೇನು. | ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007ರ 2) ಮತ್ತು ನಿಯಮಗಳು-2008 (ನಿಯಮಗಳ ತಿದ್ದುಪಡಿ-2012) ರ ನಿಯಮ 3(1) ರಂತೆ ವೈಯಕ್ತಿಕ ಹಕ್ಕಿನ ಮಾನ್ಯತೆ ಪಡೆದ ಗ್ರಾಮಗಳ ವ್ಯಾಪ್ತಿಯಲ್ಲಿ ನಿಯಮ 3(2) ರಂತೆ ಸರ್ಕಾರಿ ಶಾಲೆಗಳಿಗೆ 1 ಹೆಕ್ಟೇರ್ ವರೆಗೆ ಮಾನ್ಯತೆ ನೀಡುವ ನಿಯಮವಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ.<br><br>ಗ್ರಾಮ ಅರಣ್ಯ ಹಕ್ಕು ಸಮಿತಿಗಳು ಜಿ.ಪಿ.ಎಸ್. ಸರ್ವೆ ಮಾಡಿದ್ದು, ಸದರಿ ಅರ್ಜಿಗಳು ಕಾಯ್ದೆಯಂತೆ ವಿವಿಧ ಸಮಿತಿಗಳ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಆ | ಶಾಲಾ ಮಕ್ಕಳಿಗೆ ಮೈದಾನಕ್ಕಾಗಿ ಶಾಲೆಗೆ ತಾಗಿಕೊಂಡಿರುವ ಮತ್ತು ಆವರಣದಲ್ಲಿರುವಂತಹ ಮರಗಳನ್ನು ತೆಗೆದು ಸಮತಟ್ಟಾದ ಮೈದಾನಕ್ಕೆ ಅವಕಾಶ ಮಾಡಿಕೊಡಲು ಇರುವ ಮಾನದಂಡಗಳಾವುವು; ಶಾಲೆಯ ಸುತ್ತಲೂ ಫಾರೆಸ್ಟ್ ಕಾಂಪೌಂಡ್ ವಾಲ್ ನಿರ್ಮಿಸಿಕೊಡುವುದಕ್ಕೆ ಇರುವ ಮಾನದಂಡಗಳಾವುವು? (ವಿವರ ನೀಡುವುದು) | ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007ರ 2) ಮತ್ತು ನಿಯಮಗಳು-2008 (ನಿಯಮಗಳ ತಿದ್ದುಪಡಿ-2012) ರ ನಿಯಮ 3(1) ರ ಪ್ರಕಾರ ಮಾನ್ಯತೆ ಪಡೆದ ಗ್ರಾಮಗಳಲ್ಲಿ ನಿಯಮ 3(2) ರಲ್ಲಿ ನಮೂದಿಸಿರುವ 13 ಸೌಲಭ್ಯಗಳಲ್ಲಿ ಪ್ರತಿ ಸೌಲಭ್ಯಕ್ಕೆ 1 ಹೆಕ್ಟೇರ್ ವರೆಗೆ ನೀಡಲು ಅವಕಾಶವಿದ್ದು, ಅದರಂತೆ ಶಾಲೆ ಮತ್ತು ಆವರಣ ಅಭಿವೃದ್ಧಿ ಪಡಿಸಲು ಸಂಬಂಧಪಟ್ಟ ಇಲಾಖೆಯವರು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿಯಾನುಸಾರ ಕ್ರಮ ಕೈಗೊಳ್ಳಬಹುದು. |

**ಸಂಖ್ಯೆ: FEE/192/FLL/2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.